ಮೈಸೂರ ಗೆಜೆಟ್

ಸರ್ಕಾರದಿಂದ ಘಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಜುಲೈ ತಾ॥ 23, ಸ್ಯ 1887.

ಈ ಭಾಗವನ್ನು ಪ್ರತ್ಯೇಕ ಕೂರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು, ವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಾರೆಸ್ಟ್ ಇಲಾಖೆ.

ತಾರೀಖು 23ನೇ ಜೂನ್ 1887.

ಹಾಸನದ ಡಿಸ್ಟ್ರಿಕ್ಟು ಮಂಜೆರಾಬಾದ್ ತಾಲ್ಲೂಕಿನಲ್ಲಿ ಇರತಕ್ಕ ಇದರಲ್ಲೀ ಕಂಡ ಫೂಟೀ ಫಾರೆಸ್ಟುಗಳು ಮತ್ತು ಪ್ಲಾಂಟೇರ್ಷನ್‌ಗಳಲ್ಲಿ ಉತ್ಪತ್ತಿಯಾಗುವ ಇಲಾಚಿ ಮತ್ತು ಮೆಣಸನ್ನು ಗೇಣೀಮೂಲಕ ಹತ್ತು ವರುಷಗಳ ಕಾಲಕ್ಕೆ ಅಂದರೆ 1887—88ನೇ ಸರ್ಕಾರ್ ಸಾಲ್ ಲಾಗಾಯತು 1896—97ನೇ ಸರ್ಕಾರ್ ಸಾಲಿನವರಿಗೆ ಜಮಾಯಿಸುವ ಹಕ್ಕುದಾರಿ ಬಗ್ಗೆ ದರಖಾಸ್ತುಗಳು ಯಿದರ ದೆಸೆಯಿಂದ ಅಪೇಕ್ಷಿಸಲ್ಪಡುತವೆ.

1. ಬಿದುರದ ಉಡವೇದೇಖೀಲ್ ಬಿಸಲೇಫೂಟ ಫಾರೆಸ್ಟು.
2. ಕಾಗನೀರೆಫೂಟ ಫಾರೆಸ್ಟು.
3. ಕೆಂಪಹೊಳೆ ಮತ್ತು ಕೆಂಚನ ಕುಮರಿ ಫಾರೆಸ್ಟುಗಳು.
4. ಕಬ್ಬಿನಾಲೆ ಮತ್ತು ಮೇಲಗದ್ದೆ ಫಾರೆಸ್ಟುಗಳು.
5. ನಡತೊಪ್ಪಲು ಪ್ಲಾಂಟೇರ್ಷ.

2. ದರಖಾಸ್ತುಗಳು, "ಫೂಟ್ ಫಾರೆಸ್ಟುಗಳು ವ ಪ್ಲಾಂಟೇರ್ಷಗಳ ಇಲಾಚಿ ಮತ್ತು ಮೆಣಸಿನಗೇಣಿಗೋಸ್ಕರ ದರಖಾಸ್ತುಗಳು" ಯಂಬದಾಗಿ ಮೇಲ್‌ವಿಳಾಸ ಬರೆಯಲ್ಪಟ್ಟು ಹಾಸನದ ಮೊಕ್ಕಾಂ ಹಾಸನದ ಡಿಸ್ಟ್ರಿಕ್ಟು ಡೆಪ್ಯುಟೆ ಕಮ್ಮಿಷನರವರಿಗೆ 1887ನೇ ಇಸವಿ ಆಗಸ್ಟು 10ನೇ ಮಂಗಳವಾರ ಯಾ ಅದಕ್ಕೆ ಮುಂಚಿತವಾಗಿ ತಲಪುವಂತೆ ಕಳುಹಿಸಲ್ಪಡತಕ್ಕದ್ದು. ದರಖಾಸ್ತುಗಳು 1887ನೇ ಇಸವಿ ಆಗಸ್ಟು 10ನೇ ಮಂಗಳವಾರ ಮಿನಲ್ಲಿ ಹಾಜರಿರಬಹುದಾದ ದರಖಾಸ್ತುದಾರರ ರೂಬರೂ ಡೆಪ್ಯುಟೆ ಕಮ್ಮಿಷನರವರ ಆಫೀಸಿನಲ್ಲಿ ಸದರೀ ಯವರಿಂದಲಾಗಲೀ ಅಥವಾ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರವರಿಂದಲಾಗಲೀ ಆಫೀಸ್ ಹೊತ್ತಿನಲ್ಲಿ ಖುಲ್ಲಾ ಮಾಡಲ್ಪಡುವದು. ದರಖಾಸ್ತುಗಳ ಆಖೈರ್ ವಿಲೇವಾರಿಯು ಮೈಸೂರು ದೇಶದ ಫಾರೆಸ್ಟು ವ ಪ್ಲಾಂಟೇರ್ಷಗಳ ಇನ್‌ಸ್ಪೆಕ್ಟರ್‌ಜನರಲ್‌ಯವರಿಗೆ ಕೇರಿಯಿರುತ್ತೆ; ಸದರೀ ಯಾವ ದರಖಾಸ್ತನ್ನಾಗಲೀ ಯಾ ತಮ್ಮಾಂ ದರಖಾಸ್ತುಗಳನ್ನಾಗಲೀ ಯಾವ ಸಬಬೂ ತಿಳಿಸದೆಯೆ ತಿರಸ್ಕರಿಸುವ ಪೂರಾ ಸ್ವಾತಂತ್ರ್ಯವನ್ನು ತಮ್ಮಲ್ಲಿಯೇ ಉಳಕೊಂಡಿರುತ್ತಾರೆ.

3. ಪ್ರತಿ ದರಖಾಸ್ತಿನ ಸಂಗಡಲೂ ನಗದಾಗಿಯಾಗಲೀ ಕರ್ಣಿಸಿನೋಟಿನ ಮೂಲಕವಾಗಿಯಾಗಲೀ ಒಂದು ನೂರು ರೂಪಾಯಿಗಳ ಠೇವಣಿಯನ್ನು ಕಳುಹಿಸತಕ್ಕದ್ದು. ತಿರಸ್ಕರಿಸಲ್ಪಡುವ ದರಖಾಸ್ತುದಾರರಿಂದ ಹಾರಾಜಮ್ಮಾಡಲ್ಪಟ್ಟ ಠೇವಣಿಗಳು, ಆಯಾ ಜನಗಳಿಗೆ ಕ್ರಮವಾಗಿ ವಾಪಸ್ ಮಾಡಲ್ಪಡುವವು.

4. ಯಾವ ದರಖಾಸ್ತು ಫಾರೆಸ್ಟು ವ ಪ್ಲಾಂಟೇರ್ಷಗಳ ಇನ್‌ಸ್ಪೆಕ್ಟರ್ ಜನರಲ್‌ಯವರಿಂದ ಆಖೈರಾಗಿ ಮಂಜೂರ್ಮಾಡಲ್ಪಡುತ್ತದೆಯೋ ಅಂಥಾ ದರಖಾಸ್ತುದಾರನು, ತನ್ನ ದರಖಾಸ್ತು ಮಂಜೂರ್ಮಾಡಲ್ಪಟ್ಟ ಸಂಗತಿ ಅವನಿಗೆ ತಿಳಿಸಲ್ಪಟ್ಟ 15 ದಿವಸಗಳವಳಗಾಗಿ ನಗದಾಗಿಯಾದರೂ ಅಥವಾ ಕರ್ಣಿಸಿನೋಟುಗಳ ಮೂಲಕವಾಗಿಯಾದರೂ, ತಾನು ಮೊದಲೆ ಹಾಜರ್ಮಾಡಿರುವ ಡಿವಾಜಿಟ್ ಮೊಬಲಗು ದೇಖೀಲ್ ಗುತ್ತಿಗೆ ಮೊಬಲಗಿನ ಹತ್ತರಲ್ಲಿ ಒಂದು ಭಾಗಕ್ಕೆ ಸಮನಾಗುವಂತೆ ಠೇವಣಿ ಮೊಬಲಗನ್ನು ಡೆಪ್ಯುಟೆ ಕಮ್ಮಿಷನರಲ್ಲಿ ಹಾಜರ್ಮಾಡಿ, ತಕ್ಕ ಛಾಪಾ ಕಾಗದ್ದಲ್ಲಿ ಮುಂದೆ ವಿವರಿಸಲ್ಪಟ್ಟ ಷರತ್ತುಗಳಿಗೆ ಒಳಪಟ್ಟು ಬದ್ಧನಾಗಿ ಕರಾರು ಬರೆದು ಕೊಡತಕ್ಕದ್ದು; ಮತ್ತು

ಆತನು ಸದರೀ ಕರಾರಿಗೆ ರುಜು ಮಾಡುವದಕ್ಕೆ ತಪ್ಪಿದರೆ ಯಾ ತಿರಸ್ಕರಿಸಿದರೆ ಅಥವಾ ಅವಶ್ಯಕವಾದ ಜೇವಣಿಯನ್ನು ಹಾಜರ್ಮಾಡದಿದ್ದರೆ, ಮೊದಲೇ ಯಿಜೋಣಾದ ಪ್ರಪಾಜಿಟ್ಟು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದಲ್ಲದೆ ಗೇಣಿಯು ಅನ್ಯಥಾ ವಿಲುಮಾಡಲ್ಪಡುವದು.

5. ಹಾಲೀ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುವ ಗೇಣಿಯು, ಇದರಡೀ ಕಂಡ ಪ್ರಾತ್ತು ಗಳಿಗೆ ವಳಪಟ್ಟಿರತಕ್ಕದ್ದು:—

I. ಗೇಣಿ ಮೊಬಲಗು ಹತ್ತು ಸವನಾದ ಸಾಲಿಯಾನಾ ಖಿಸ್ತುಗಳಾಗಿ ಪ್ರತಿ ಆಗಸ್ಟ್ಟು ತಿಂಗಳಲ್ಲಿ ಅಂದರೆ ಆಯಾ ಕಾಲದ ಫಸಲನ್ನು ಜವಾಯಿಸುವದಕ್ಕೆ ಮುಂಚಿತವಾಗಿ ಸರಕಾರಕ್ಕೆ ಪಾವತಿ ಮಾಡಲ್ಪಡತಕ್ಕದ್ದು. ಗೇಣಿದಾರನು ಇದಕ್ಕೆ ತಪ್ಪಿದರೆ ಗೇಣಿಯು ರದ್ದುಮಾಡಲ್ಪಟ್ಟು ಗೇಣಿಗೆ ಕೊಡಲ್ಪಟ್ಟ ಫಾರೆಸ್ಟು ಯಾ ಪ್ಲಾಂಟೇರ್ಷ ಸರ್ಕಾರ್ ಸ್ವಾಧೀನತೆಗೆ ತೆಗದುಕ್ಕೊಳ್ಳಲ್ಪಡುವದು. ಗೇಣಿದಾರನಿಂದ ಇಡಲ್ಪಟ್ಟ ಜೇವಣಿಯು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

II. ಗೇಣಿ ವಾಯಿದೆಯು ಮುಗಿದ ತರುವಾಯ, ಗೇಣಿಯನ್ನು ರೆನ್ಯೂ ಯಾನೆ ಪ್ರನಹಾ ಪಡೆಯುವ ಬಗ್ಗೆ ಸರ್ಕಾರದವರಿಗೆ ಯುಕ್ತವಾಗಿ ತೋರಿಬರುವ ಷರತ್ತುಗಳ ಮೇಲೆ ಮತ್ತು ಹಾಂಗೆ ಗೊತ್ತುಪಡಿಸಲ್ಪಡಬಹುದಾದ ಕಾಲಕ್ಕೆ ಗೇಣಿದಾರನಿಗೆ ಅವಕಾಶ ಕೊಡಲ್ಪಡುವದು.

III. ಗೇಣಿಯು, ಯಿಲಾಚಿ ಮತ್ತು ಮೆಣಸನ್ನು ಜವಾಯಿಸುವದಕ್ಕೂ ಮತ್ತು ಅವುಗಳನ್ನು ಸಾಗುವಳಿ ಮಾಡುವದಕ್ಕೂ ಮಾತ್ರವೇ ಆಗಿರುವದರಿಂದ, ಇನ್ಯಾವ ತರಹೆಯ ಇತರ ಫಸಲಾಗಲೀ ಗೇಣಿಗೆ ಪಡೆದಿರುವ ಫಾರೆಸ್ಟಿನಲ್ಲಿ ಸಾಗುವಳಿ ಮಾಡಲ್ಪಡಕೂಡದು, ಪರಂತು ಯಿಲಾಚಿ ಗಿಡಗಳಿಗೂ ಮೆಣಸಿನ ಬಳ್ಳಿಗಳಿಗೂ ನೆರಳಿಗೋಸ್ಕರ ಅವಶ್ಯಕವಾದ ಬಾಳೆ ಹರಳು ಯಾ ಇತರ ಮರಗಳು ಬೆಳಿಸಕೂಡದೆಂದು ಅರ್ಥವಾಗತಕ್ಕದ್ದಲ್ಲಾ.

IV. ಫಾರೆಸ್ಟು ಆಫೀಸರರ ಬರಹಮೂಲಕವಾದ ಅಪ್ಪಣೆ ವಿನಾ ಯಾವವಿಧವಾದ ಮರವೇಆಗಲೀ ಕಡಿಯಲ್ಪಡಕೂಡದು; ಮತ್ತು ಗೇಣಿಗೆ ಕೊಡಲ್ಪಟ್ಟ ಫಾರೆಸ್ಟುಗಳಿಂದ ಯಾವ ಇಲಾಚಿಗಿಡಗಳಾಗಲೀ ಮೆಣಸಿನಬಳ್ಳಿಯಾಗಲಿ ಯಾವ ಸಂದರ್ಭಗಳಲ್ಲೂ ಆಚೆಗೆ ಆಚಿಗೆ ಸಾಗಿಸಲ್ಪಡಕೂಡದು. ಯಿಲಾಚಿ ಗಿಡಗಳ ಮತ್ತು ಮೆಣಸಿನಬಳ್ಳಿಗಳ ಬೆಳವಣಿಗೆ ಯಾ ಅಭಿವೃದ್ಧಿಗೋಸ್ಕರವೇ ಜಮೀನನ್ನು ಬೈಲ್ ಮಾಡುವದಕ್ಕಾಗಿ ಯಾವದಾದರೂ ಮರಗಳನ್ನು ಕತರಾಯಿಸುವದು ಅವಶ್ಯಕವಾದಾಗ ಗೇಣಿದಾರನು ಫಾರೆಸ್ಟು ಆಫೀಸರರಿಗೆ ಬರೆದು ಕೊಳ್ಳತಕ್ಕದ್ದು, ಅವರು ಕತರಾಯಿಸಲ್ಪಡಬೇಕಾದ ಮರಗಳನ್ನು ಗುರ್ತು ಮಾಡತಕ್ಕದ್ದು ಮತ್ತು ಹಾಂಗೆ ಕತರಾಯಿಸಲ್ಪಟ್ಟ ಮರಗಳು ಫಾರೆಸ್ಟು ಇಲಾಖೆಯವರಿಂದ ಸ್ವಾಧೀನಕ್ಕೆ ತೆಗೆದುಕೊಳ್ಳಲ್ಪಡತಕ್ಕದ್ದು. ಗೇಣಿದಾರನು ಸದರೀ ಮರಗಳ ಪೈಕಿ ಯಾವದನ್ನಾದರೂ ಅಪೇಕ್ಷಿಸಿದರೆ, ಇದರಡೀ ಕಂಡ ಗೊತ್ತಾದ ಸೀನಿಯರೇಜ್ ಯಾನೆ ತೀರ್ವೆ ದರಗಳು ಯಾ ಡೆಪ್ಯುಟಿ ಕಮ್ಮಿಷನರವರ ಯುಕ್ತನುಸಾರ ಯಿನ್ನೂ ಕಮ್ಮಿಯಾದ ದರಗಳು ಪಾವತೀ ಮಾಡಲ್ಪಟ್ಟು ತರುವಾಯ ಕೊಡಲ್ಪಡತಕ್ಕದ್ದು:—

		ರೂ.
ಪ್ಯೂ	ದರಮರ ವಂದಕ್ಕೆ	15
ಹೆಸವಾ	ಡಿಟೋ	10
ಕರೀಮರ	ಡಿಟೋ	8
ನಂದಿ	ಡಿಟೋ	8
ಹೆಜನಿ	ಡಿಟೋ	6
ಯಬನಿ	ಡಿಟೋ	10
ಇತರ ತಮಾಂ ತರಹೆಯ ಮರಗಳೂ	ಡಿಟೋ	3½
ಹೊಂಬುಗಳು	ದರ 100ಕ್ಕೆ	10

V. ಗೇಣಿದಾರನು, ಇಲಾಚಿ ಮತ್ತು ಮೆಣಸು ವಿನಾ ಇತರ ಯಾವ ಫಾರೆಸ್ಟು ಹುಟ್ಟುವಳಿಗಾಗಲೀ ಹಕ್ಕುದಾರನಾಗಿರುವದಿಲ್ಲಾ, ಮತ್ತು ಫಾರೆಸ್ಟುಗಳು ವ ಪ್ಲಾಂಟೇರ್ಷಗಳಲ್ಲಿರತಕ್ಕ ರಸ್ತೆಗಳನ್ನು ಆವರಣಿಸುವದಕ್ಕಾಗಲಿ, ನಿರೋಧಪಡಿಸುವದಕ್ಕಾಗಲಿ ಯಾ ಮತ್ಯಾವ ವಿಧವಾಗಿಯಾದರೂ ಆಟಂಕಪಡಿಸುವದಕ್ಕಾಗಲೀ ಗೇಣಿದಾರಗೆ ಸ್ವತಂತ್ರ ವಿರುವದಿಲ್ಲಾ, ಮತ್ತು ಗವರ್ಮೆಂಟಿನವರು ಅಂಥಾ ತಮಾಂ ಫಾರೆಸ್ಟು ವ ಪ್ಲಾಂಟೇರ್ಷಗಳಲ್ಲಿಯ ಯಾವ್ಲ ತರಹೆಯ ಪೂರ್ತಿಯಾದ ಹಕ್ಕುದಾರಿಗಳನ್ನೂ ತಾವೆ ಉಳಿಸಿಕೊಂಡಿರುತ್ತಾರೆ.

VI. ಈ ರೂಲ್ಸ್ ಅನುಸರಿಸಿ ಪಡೆದ ಇಲಾಚಿ ವ ಮೆಣಸಿನ ಗೇಣಿಯು ಗೇಣೀದಾರನ ಯಿಷ್ಟಾನುಸಾರ ವಿಕ್ರಯಿಸಲ್ಪಡಬಹುದು ಯಾ ಅನ್ಯಥಾ ಪರಭಾರೆ ಮಾಡಲ್ಪಡಬಹುದು, ಪರಂತು ಅಂಥಾ ಪರಭಾರೆಯು ವರ್ತಮಾನವು ಡೆಪ್ಯುಟಿ ಕಮ್ಮಿಷನರವರಿಗೆ ಅವರ ಆಫೀಸಿನಲ್ಲಿ ದಾಖಲೆ ಬಗ್ಯಾಗಿ ಕೊಡಲ್ಪಡತಕ್ಕದ್ದು, ಮತ್ತು ಗೇಣಿಯ ಪರಭಾರೆಯು ರೆಜಿಸ್ಟ್ರೇಷನ್ ಆಕ್ಟಿನ ನಿಯಮಗಳನ್ನನುಸರಿಸಿ ಕ್ರಮವಾಗಿ ರಿಜಿಸ್ಟ್ರು ಮಾಡಲ್ಪಡತಕ್ಕದ್ದು.

ಯಲ್. ರಿಕ್ಕೆಟ್ಸ್,
ಫಾರೆಸ್ಟ್ ಇನ್ಸ್ಪೆಕ್ಟರ್ ಜನರಲ್.